9-72-(141)

| | | | | |
|---|---|---|---|---|
| ಅನಧಿಕೃತ ಮರಳು ಗಣಿಗಾರಿಕೆ ಮತ್ತು ದಾಸ್ತಾನು | | 10 | 10 | ಅನಧಿಕೃತ ಮರಳು ಗಣಿಗಾರಿಕೆ ಮತ್ತು ದಾಸ್ತಾನಿನಡಿ ಒಟ್ಟು 30170 ಮೆಟ್ರಿಕ್ ಟನ್ ಮರಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. |

ಮುಂದುವರೆದು, ಗೂಗಲ್ ಗ್ರಾಮದ ಕೃಷ್ಣ ನದಿ ಪಾತ್ರದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ತಡೆಗಟ್ಟಲು ನದಿಪಾತ್ರಕ್ಕೆ ಹೋಗುವ ರಸ್ತೆಗಳಿಗೆ ಅಡ್ಡಲಾಗಿ ಕಂದಕಗಳನ್ನು ಸಹ ಜಿಲ್ಲಾ ಹಾಗೂ ತಾಲ್ಲೂಕು ಮರಳು ಸಮಿತಿಯಿಂದ ನಿರ್ಮಿಸಲಾಗಿರುತ್ತದೆ.

ದೇವದುರ್ಗ ತಾಲ್ಲೂಕಿನ ಚಿಕ್ಕರಾಯಕುಂಪಿ-1 ಗ್ರಾಮದಲ್ಲಿ ಮಂಜೂರಾಗಿರುವ ಮರಳು ಗಣಿಗುತ್ತಿಗೆ ಸಂಖ್ಯೆ RAIOS10ಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರು ಗುತ್ತಿಗೆ ಪ್ರದೇಶವನ್ನು ಹೊರತುಪಡಿಸಿ ಒತ್ತುವರಿ ಮಾಡಿ ಗೂಗಲ್ ಗ್ರಾಮದ ಕೃಷ್ಣ ನದಿ ಪಾತ್ರದ ವ್ಯಾಪ್ತಿಯಲ್ಲಿ ಗಣಿಗಾರಿಕೆ ಮತ್ತು ಸ್ಟಾಕ್ ಯಾರ್ಡ್ ನಿಂದ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ರೂ.53,67,600/-ಗಳು ಹಾಗೂ ಇತರೆ ನಿಯಮಗಳ ಉಲ್ಲಂಘನೆಗಾಗಿ ರೂ.1,25,000/- ಸೇರಿ ಒಟ್ಟು ರೂ.54,92,600/-ಗಳ ದಂಡವನ್ನು ವಿಧಿಸಲಾಗಿದ್ದು, ಈ ಪೈಕಿ ಗುತ್ತಿಗೆದಾರರಿಂದ ರೂ.18,00,000/-ಗಳನ್ನು ವಸೂಲಿ ಮಾಡಲಾಗಿರುತ್ತದೆ.

ದೇವದುರ್ಗ ತಾಲ್ಲೂಕಿನ ಚಿಕ್ಕರಾಯಕುಂಪಿ-2 ಗ್ರಾಮದಲ್ಲಿ ಮಂಜೂರಾಗಿರುವ ಮರಳು ಗಣಿಗುತ್ತಿಗೆ ಸಂಖ್ಯೆ RAIOS20ಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರು ಗುತ್ತಿಗೆ ಪ್ರದೇಶವನ್ನು ಹೊರತುಪಡಿಸಿ ಒತ್ತುವರಿ ಮಾಡಿ ಗೂಗಲ್ ಗ್ರಾಮದ ಕೃಷ್ಣ ನದಿ ಪಾತ್ರದ ವ್ಯಾಪ್ತಿಯಲ್ಲಿ ಗಣಿಗಾರಿಕೆ ಮತ್ತು ಸ್ಟಾಕ್ ಯಾರ್ಡ್ ನಿಂದ ಅನಧಿಕೃತವಾಗಿ ಮರಳು ಸಾಗಾಣಿಕೆ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಮೊತ್ತ ರೂ.8,04,000/- ಗಳು ಹಾಗೂ ಇತರೆ ನಿಯಮಗಳ ಉಲ್ಲಂಘನೆಗಾಗಿ ರೂ.1,00,000/- ಗಳು ಸೇರಿದಂತೆ ಒಟ್ಟು ರೂ.9,04,000/- ಗಳ ದಂಡವನ್ನು ವಿಧಿಸಲಾಗಿರುತ್ತದೆ. ಗುತ್ತಿಗೆದಾರರಿಂದ ದಂಡ ವಸೂಲಾತಿಗೆ ಕ್ರಮವಹಿಸಲಾಗುತ್ತಿದೆ.

ಮೇಲ್ಕಂಡಂತೆ, ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನ ಕೃಷ್ಣ ನದಿ ಪಾತ್ರದಲ್ಲಿ ಗೂಗಲ್ ಹಾಗೂ ಅಕ್ಕಪಕ್ಕದ ಗ್ರಾಮಗಳ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆ ತಡೆಗಟ್ಟಲು ಜಿಲ್ಲಾ ಮತ್ತು ತಾಲ್ಲೂಕು ಮರಳು ಸಮಿತಿಯಿಂದ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ ಸಿಐ 670 ಎಂಎಂಎನ್ 2021

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.